೨) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ನ್ಯಾಯಿ ಕಡಿತಕ್ಕೆ ಲಸಿಕೆಯನ್ನು ಪೂರೈಸದೇ ಇರುವುದರಿಂದ ಜನರಿಗೆ ಅನಾನುಕೂಲವಾಗಿರುವುದು.

ಶ್ರೀ ಚಂದ್ರಶೇಖರ ರೆಡ್ಡಿ ಎಂ. ದೇಶ್‌ಮುಖ್.—ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಈ ವೊದಲು ನಾಯಿ ಕಡಿತಕ್ಕಾಗಿ ಲಸಿಕೆಯನ್ನು ಸಾಕಷ್ಟು ಪ್ರಮಾಣದಲ್ಲಿ ಸರ್ಕಾರದವರು ಪೂರೈಸುತ್ತಿದ್ದರು, ಸುಮಾರು ಮೂರು ತಿಂಗಳು ಲಾಗಾಯ್ತು ಸದರಿ ಲಸಿಕೆಯನ್ನು ಪೂರೈಸದೇ ಇರುವುದರಿಂದ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯುಂಟಾಗಿದೆ. ನಾಯಿ ಕಚ್ಚುವುದರಿಂದ ಲಸಿಕೆಯ ಪೂರ್ತಿ ಕೋರ್ಸನ್ನು ತೆಗೆದುಕೊಳ್ಳಬೇಕಾಗಿರುವುದು ಅವಶ್ಯಕವಿದೆ, ನಮ್ಮ ತಾಲ್ಲೂಕಿನಲ್ಲಿ ಈ ಮೂರು ತಿಂಗಳ ಅವಧಿಯಲ್ಲಿ ಇಪ್ಪತ್ತಕ್ಕೂ ಮಿಕ್ಕಿ ನಾಯಿ ಕಚ್ಚಿದ ಪ್ರಕರಣಗಳು ಜರುಗಿವೆ, ಅದರಲ್ಲಿ ಒಬ್ಬರು ವ್ಯಕ್ತಿಯೂ ಮೃತಪಟ್ಟಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಸದರಿ ಲಸಿಕೆ ಇಲ್ಲದೆ ಇರುವುದರಿಂದ ಹೊರಗೆ ಮಾರುಕಟ್ಟೆಯಲ್ಲಿ ಸಿಕ್ಕುವ ಔಷಧಿಗಾಗಿ ಪರದಾಡಬೇಕಾಗಿದೆ. ಮಾರುಕಟ್ಟೆಯಲ್ಲಿ ಕೇವಲ ಒಂದೇ ನವೂನೆಯ ರ್ಯಾಬಿಪುರ ಎಂಬ ಲಸಿಕೆಯು ಲಭ್ಯವಿದ್ದು ಅದು ಸುಮಾರು ರೂ. ೧೪೬ ಕಿಮ್ಮತ್ತು ಆಗುತ್ತದೆ ಇಂತಹ ಕನಿಷ್ಟ ಏಳು ಎಂಜೆಕ್ಷನ್‌ಗಳನ್ನಾದರೂ ನಾಯಿ ಕಡಿದವರು ತೆಗೆದುಕೊಳ್ಳಬೇಕಾಗುತ್ತದೆ. ಇದು ಸಾಮಾನ್ಯ ಜನರಿಂದ ಸಾಧ್ಯವಾಗಲಾರದದ್ದು. ಇದರಿಂದ ಸಾರ್ವಜನಿಕರಲ್ಲಿ ಕಳವಳ ಉಂಟಾಗಿದೆ.

ಕಾರಣ ಈ ವಿಷಯವನ್ನು ತುರ್ತು ಪರಿಹಾರ ಒದಗಿಸಲು ಕೋರಿ ಸರ್ಕಾರದ ಗಮನಕ್ಕೆ ತರಲಾಗಿದೆ.

ಶ್ರೀ ಎಂ. ರಘುಪತಿ,—ಆಲ್ಲಿಗೆ ಬೇಕಾಗುವ ಔಷಧಿಗಳನ್ನು ದೊರೆಯುವಂತೆ ವ್ಯವಸ್ಥೆ ಮಾಡುವುದಕ್ಕೆ ಏರ್ಪಾಡು ಮಾಡಿಸುತ್ತೇನೆ.

(ಶ್ರೀಮತಿ ಸುಮಾ ವಸಂತರವರು ಗೈರುಹಾಜರಿ.)

(ಶ್ರೀ ಎ. ಎಂ. ಹಿಂಡಸ್‌ಗೇರಿಯವರು ಗೈರುಹಾಜರಿ.)

ಕರ್ನಾಟಕಾದಾದ್ಯಂತ ಲಕ್ಷಾಂತರ ಫಲಾನುಭವಿಗಳಿಗೆ ಹಸಿರುಕಾರ್ಡು ಸಿಕ್ಕದೆ ತೊಂದರೆ ಗೀಡಾಗಿರುವ ಬಗ್ಗೆ.

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕದಾದ್ಯಂತ ಹಸಿರು ಕಾರ್ಡ್ ಹಂಚಿಕೆ ಯೋಜನೆ ಇದ್ದರೂ, ಲಕ್ಷಾಂತರ ಫಲಾನುಭವಿಗಳಿಗೆ ಹಸಿರು ಕಾರ್ಡು ಸಿಕ್ಕದೆ ತೊಂದರೆಗೀಡಾಗಿದ್ದಾರೆ. ಹಸಿರು ಕಾರ್ಡ್ ನ್ಯಾಯವಾಗಿ ಕೊಡಬೇಕಾದವರಿಗೆ ಕೊಡಲು ಸರ್ಕಾರ ಬದ್ಧವಿದೆ ಎಂದು ಹೇಳುತ್ತಿದ್ದರೂ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಸರ್ಕಾರದವರು ತಮಗೆ ಹಸಿರು ಕಾರ್ಡು ಸರಬರಾಜು ಮಾಡಿಲ್ಲವೆಂದು, ಈ ಬಗ್ಗೆ ಸ್ಪಷ್ಟ ನಿಲುವು ಸರ್ಕಾರ ತಮಗೆ ತಿಳಿಸಿಲ್ಲವೆಂದು ಹೇಳಿ ಮುಂದೆ ಮುಂದೆ ಹಾಕಿ ಫಲಾನುಭವಿಗಳನ್ನು ಕಛೇರಿಗಳಿಗೆ ತಿರುಗಿಸಿ ತಿರುಗಿಸುತ್ತಿರುತ್ತಾರೆ. ನ್ಯಾಯವಾಗಿ ಹಸಿರು ಕಾರ್ಡ್ ಕೊಡ ಲೊಪ್ಪಿಸಿರುವವರಿಗೆ ಸರ್ಕಾರ ಹಸಿರು ಕಾರ್ಡ್ ಕೊಡಬೇಕು. ಇದನ್ನು ನಿಧಾನಿಸಿ ಬಡವರನ್ನು ಸತಾಯಿಸದೆ ಸರ್ಕಾರ ಈಗಲಾದರೂ ಸ್ಪಷ್ಟ ನಿರ್ದೇಶನವಿತ್ತು ಹಸಿರು ಕಾರ್ಡ್ ಹಂಚಬೇಕೆಂದು ಸರ್ಕಾರದ ಗಮನ ಸೆಳೆದು ಮಾನ್ಯ ಆಹಾರ ಮಂತ್ರಿಗಳ ಹೇಳಿಕೆಯನ್ನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು),—ಮಾನ್ಯ ಅಧ್ಯಕ್ಷರೆ, ಕರ್ನಾಟಕದಾದ್ಯಂತ ಹಸಿರು ಕಾರ್ಡ್ ಯೋಜನೆಯನ್ನು ದಿನಾಂಕ ೧-೧೧-೮೫ ರಂದು ಜಾರಿಗೆ ತರಲಾಯಿತು. ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ಕುಟುಂಬದ ಆದಾಯ ೩,೫೦೦-೦೦ ರೂಪಾಯಿಗಳಿಗಿಂತ ಕಡಿಮೆ ಇರುವ ೨೪.೦೨ ಲಕ್ಷ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ವಿತರಿಸಲಾಗಿತ್ತು. ಕೆಲವು ಅರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳು ಲಭ್ಯವಾಗಿಲ್ಲ ಎಂದು ಸರ್ಕಾರದ ಗಮನಕ್ಕೆ ಬಂದಾಗ ಎಲ್ಲಾ ಭೂ ರಹಿತ ಕೃಷಿ ಕಾರ್ಮಿಕರಿಗೆ ಹಸಿರು ಪಡಿತರ ಚೀಟಿಗಳನ್ನು ನೀಡುವಂತೆಯೂ, ಬಿಟ್ಟು ಹೋಗಿರುವ ಇತರ ಅರ್ಹ ಕುಟುಂಬಗಳಿಗೂ ಹಸಿರು ಪಡಿತರ ಚೀಟಿಗಳನ್ನು ನೀಡುವಂತೆ ಸರ್ಕಾರ ಆದೇಶ ಹೊರಡಿಸಿತ್ತು. ಅದರಂತೆ ದಿನಾಂಕ ೧-೬-೮೬ ರಲ್ಲಿ